# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1563 |
| ಮಾನ್ಯ ಸದಸ್ಯರ ಹೆಸರು | ಶ್ರೀ ಪ್ರತಾಪ್ ಸಿಂಹ ನಾಯಕ್ .ಕೆ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 21/03/2025 |
| ಉತ್ತರಿಸುವ ಸಚಿವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳಿಗೆ ಸಿಗುತ್ತಿರುವ ಸ್ಕಾಲರ್ ಶಿಪ್ ಹಣದ ವಿವರಗಳೇನು; ಸದರಿ ಸ್ಕಾಲರ್ ಶಿಪ್ ಹಣದ ಮೊತ್ತವನ್ನು 2024-25ನೇ ಸಾಲಿನವರೆಗೂ ಈಗಾಗಲೇ ಪೂರ್ತಿಯಾಗಿ ಪಾವತಿಸಲಾಗಿದೆಯೇ; | ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೀಡುತ್ತಿರುವ ಶೈಕ್ಷಣಿಕ ಸಹಾಯಧನದ ವಿವರವನ್ನು **ಅನುಬಂಧದಲ್ಲಿ** ಲಗತ್ತಿಸಿದೆ.<br><br>ಇದುವರೆಗೂ ಶೈಕ್ಷಣಿಕ ಸಹಾಯಧನ ಪಾವತಿಸಲು ಕೈಗೊಂಡ ವಿವರ ಈ ಕೆಳಕಂಡಂತಿದೆ:<br>1. 2021-22 ನೇ ಸಾಲಿನಲ್ಲಿ ಒಟ್ಟು 6,42,155 ಶೈಕ್ಷಣಿಕ ಸಹಾಯಧನದ ಅರ್ಜಿಗಳು ಸ್ವೀಕೃತಗೊಂಡಿದ್ದು, ಅದರಲ್ಲಿ 5,91,511 ಅರ್ಹ ಅರ್ಜಿಗಳಾಗಿರುತ್ತದೆ. ಸದರಿ ಅರ್ಜಿಗಳು 1,59,124 ಅರ್ಜಿಗಳಿಗೆ ಪಾವತಿಸಲು ಬಾಕಿ ಇರುತ್ತದೆ.<br>2. 2022-23 ನೇ ಸಾಲಿನಲ್ಲಿ ಒಟ್ಟು 11,13,933 ಅರ್ಜಿಗಳು ಸ್ವೀಕೃತಗೊಂಡಿದ್ದು ಅದರಲ್ಲಿ 9,61,930 ಅರ್ಹ ಅರ್ಜಿಗಳಾಗಿರುತ್ತದೆ. ಸದರಿ ಅರ್ಜಿಗಳಲ್ಲಿ 8,88,952 ಅರ್ಜಿಗಳಿಗೆ ಮೊತ್ತವನ್ನು ಪಾವತಿಸಲಾಗಿರುತ್ತದೆ ಹಾಗೂ ಬಾಕಿ ಉಳಿದ 72,978 ಅರ್ಜಿಗಳಿಗೆ ಫಲಾನುಭವಿಯ ಆಧಾರ್ ಸಂಖ್ಯೆಗೆ ಬ್ಯಾಂಕ್‌ಖಾತೆ ಜೋಡಣೆಯಾಗಿರುವುದಿಲ್ಲ.<br>3. 2023-24 ಮತ್ತು 2024-25ನೇ ಸಾಲಿನಲ್ಲಿ ಸ್ವೀಕೃತಗೊಂಡ ಶೈಕ್ಷಣಿಕ ಸಹಾಯಧನದ ಅರ್ಜಿಗಳಿಗೆ ಪಾವತಿಸಲು ಕ್ರಮವಹಿಸಲಾಗುತ್ತಿದೆ. |
| ಆ) | 2022-23ನೇ ಸಾಲಿನಲ್ಲಿ ಕಡಿತಗೊಳಿಸಲಾಗಿದ್ದ ಸ್ಕಾಲರ್ ಶಿಪ್ ಮೊತ್ತದ ಬಾಕಿ ಉಳಿಕೆ ಹಣವನ್ನು ಪಾವತಿಸುವಂತೆ ಹೈಕೋರ್ಟ್ ಆದೇಶಿಸಿದೆಯೇ; ಆದೇಶಿಸಿದ್ದಲ್ಲಿ, ಸದರಿ ಬಾಕಿ ಮೊತ್ತವನ್ನು ಈಗಾಗಲೇ ಪಾವತಿಸಲಾಗಿದೆಯೇ; | 2022-23ನೇ ಸಾಲಿನಲ್ಲಿ ಕಡಿತಗೊಳಿಸಲಾಗಿದ್ದ ಸ್ಕಾಲರ್ ಶಿಪ್ ಮೊತ್ತದ ಬಾಕಿ ಉಳಿಕೆ ಹಣವನ್ನು ಪಾವತಿಸುವಂತೆ ಮಾನ್ಯ ಉಚ್ಚ ನ್ಯಾಯಾಲಯವು ಆದೇಶಿಸಿರುತ್ತದೆ. |

| | | |
|---|---|---|
| | | 2022-23ನೇ ಸಾಲಿನಲ್ಲಿ ಕಡಿತಗೊಳಿಸಲಾಗಿದ್ದ ಸ್ಕಾಲರ್ ಶಿಪ್ ಮೊತ್ತದ ಬಾಕಿ ಉಳಿಕೆ ಹಣವನ್ನು ಪಾವತಿಸುವ ಪ್ರಕ್ರಿಯೆ ಮಂಡಳಿಯ ವತಿಯಿಂದ ಆರಂಭವಾಗಿದೆ. |
| **ಇ)** | ಇದುವರೆವಿಗೂ ಸದರಿ ಬಾಕಿ ಮೊತ್ತವನ್ನು ಪಾವತಿಸದಿದ್ದಲ್ಲಿ ಅದಕ್ಕೆ ಕಾರಣಗಳೇನು; | 2022-23ನೇ ಸಾಲಿನಲ್ಲಿ ಈಗಾಗಲೇ ಒಂದು ಬಾರಿ ಫಲಾನುಭವಿಗಳ ಆಧಾರ್ ಸಂಖ್ಯೆಗೆ ಡಿ.ಬಿ.ಟಿ ತಂತ್ರಾಂಶದ ಮೂಲಕ ಪಾವತಿಸಲಾಗಿರುವುದರಿಂದ, ಪುನಃ ಅದೇ ಫಲಾನುಭವಿಗಳ ಆಧಾರ್ ಸಂಖ್ಯೆಗೆ ಡಿ.ಬಿ.ಟಿ ತಂತ್ರಾಂಶದ ಮೂಲಕ ಮತ್ತೊಮ್ಮೆ ಪಾವತಿಸಲು ಡಿಬಿಟಿ (e-Governance) ಶಾಖೆಯು ಅವಕಾಶ ನೀಡಬೇಕಾಗಿರುವುದರಿಂದ ವಿಳಂಬವಾಗಿತ್ತು. |
| **ಈ)** | ಯಾವ ಕಾಲಮಿತಿಯೊಳಗೆ ಈ ಬಾಕಿ ಹಣವನ್ನು ಪಾವತಿಸಲಾಗುವುದು? | ಫಲಾನುಭವಿಗಳ ಆಧಾರ್ ಸಂಖ್ಯೆಗೆ ಡಿಬಿಟಿ ತಂತ್ರಾಂಶದ ಮೂಲಕ ಪಾವತಿಸಲು ಡಿಬಿಟಿ (e-Governance) ಶಾಖೆಯು ಅನುವು ಮಾಡಿಕೊಟ್ಟಿದ್ದು, ಪ್ರಸ್ತುತ ಶೈಕ್ಷಣಿಕ ಧನಸಹಾಯದ ಮೊತ್ತವನ್ನು ಪಾವತಿಸುವ ಪ್ರಕ್ರಿಯೆ ಆರಂಭಗೊಂಡಿದೆ. |

**ಕಾಇ 132 ಎಲ್ ಇಟಿ 2025**

**(ಸಂತೋಷ್ ಎಸ್. ಲಾಡ್)**
**ಕಾರ್ಮಿಕ ಸಚಿವರು**

## ಅನುಬಂಧ

## ನೋಂದಾಯಿತ ಕಟ್ಟಡ ಕಾರ್ಮಿಕರ ಇಬ್ಬರು ಮಕ್ಕಳಿಗೆ ಶೈಕ್ಷಣಿಕ ಮಂಡಳಿಯಿಂದ ಪ್ರಸ್ತುತ ನೀಡುತ್ತಿರುವ ಶೈಕ್ಷಣಿಕ ಸಹಾಯಧನದ ವಿವರ

| ಕ್ರ ಸಂ | ವಿದ್ಯಾಭ್ಯಾಸದ ವಿವರ (ತರಗತಿ ಅಥವಾ ಕೋರ್ಸ್ ಅಥವಾ ಗ್ರೇಡ್) | ವಾರ್ಷಿಕ ಶೈಕ್ಷಣಕ ಸಹಾಯಧನ ಮೊತ್ತ (ರೂ. ಗಳಲ್ಲಿ) |
|---|---|---|
| 1 | 1 ರಿಂದ 5 ನೇ ತರಗತಿ | 1,800 |
| 2 | 6 ರಿಂದ 8 ನೇ ತರಗತಿ | 2,400 |
| 3 | 9 ಹಾಗೂ 10ನೇ ತರಗತಿ | 3,000 |
| 4 | ಪ್ರಥಮ ಪಿಯುಸಿ ಮತ್ತು ದ್ವಿತೀಯ ಪಿ.ಯು.ಸಿ | 4,600 |
| 5 | ಪದವಿ | 10,000 |
| 6 | ಬಿಇ / ಬಿ.ಟೆಕ್ ಅಥವಾ ಸಂಬಂಧಪಟ್ಟ ಯೂಜಿ ಕೋರ್ಸ್ | 10,000 |
| 7 | ಸ್ನಾತಕೋತ್ತರ ಪದವಿ | 10,000 |
| 8 | ಪಾಲಿಟೆಕ್ನಿಕ್ / ಡಿಪ್ಲಮಾ/ ಐಟಿಐ | 4,600 |
| 9 | ಬಿಎಸ್‌ಸಿ ನರ್ಸಿಂಗ್/ ಜಿಎನ್‌ಎಮ್/ ಎಎನ್‌ಎಮ್/ ಪಾರಮೆಡಿಕಲ್ ಕೋರ್ಸ್ / ಅಕ್ಸುಲರಿ ನರ್ಸಿಂಗ್ ಆಂಡ್ ಮಿಡ್ವೈಫ್ | 10,000 |
| 10 | ಬಿ.ಎಡ್ | 6,000 |
| 11 | ವೈದ್ಯಕೀಯ (ಎಮ್‌ಬಿಬಿಎಸ್ /ಬಿಎಎಮ್ ಎಸ್/ ಬಿಡಿಎಸ್ /ಬಿಹೆಚ್‌ಎಮ್ ಎಸ್ ಕೋರ್ಸ್ ಅಥವಾ ಇದಕ್ಕೆ ಸಂಬಂಧಪಟ್ಟ ಸಮಾನಾಂತರ ಸ್ನಾತಕೋತ್ತರ ಕೋರ್ಸ್ | 11,000 |
| 12 | ಎಲ್‌ಎಲ್ ಬಿ/ಎಲ್ ಎಲ್ ಎಂ | 10,000 |
| 13 | ಎಮ್.ಟೆಕ್/ ಎಮ್ ಇ (ಇದಕ್ಕೆ ಸಂಬಂಧಪಟ್ಟ ಸಮಾನಾಂತರ ಸ್ನಾತಕೋತ್ತರ ಕೋರ್ಸ್) | 10,000 |
| 14 | ಎಮ್‌ಡಿ ಮೆಡಿಕಲ್ | 12,000 |
| 15 | ಪಿಹೆಚ್‌ಡಿ / ಎಮ್. ಫಿಲ್ (ಯಾವುದೇ ವಿಷಯ) | 11,000 |
| 16 | ಐಐಟಿ/ಐಐಐಟಿ/ ಐಐಎಮ್/ ಎನ್‌ಐಟಿ/ ಐಐಎಸ್‌ಇಆರ್/ಎಐಐಎಮ್‌ಎಸ್/ಎನ್‌ಎಲ್‌ಯೂ ಮತ್ತು ಭಾರತ ಸರ್ಕಾರದ ಮಾನ್ಯತೆ ಪಡೆದ ಕೋರ್ಸುಗಳು. | 11,000 |